ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ಇದು ಸರ್ಕಾರದ ನೀತಿಯೇ ? ಈ ನೀತಿ ಸರಿಯೇ? ಆ ಜನರನ್ನು ಮೋಸ ಮಾಡುವುದಕ್ಕೋಸ್ಕರ ಜನತಾ ಪಕ್ಷ ಇಂತಹ ಒಂದು ನೀತಿಯನ್ನು ಹಾಕಿಕೊಂಡು ಬಂದಿದೆಯೇ ? ಎಲ್ಲಿ ಬೇಕಾದರಲ್ಲಿ ಶಂಕುಸ್ಥಾಪನೆ ಮಾಡಿ ಜನತಾ ಸರ್ಕಾರದವರು ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ನಕ್ಷೆ, ಅಂದಾಜು ಹಾಗೂ ಮಂಜೂರಾತಿ ಮಾಡದೇ ಆಡಿಗಲ್ಲು ಹಾಕಿರುವುದು ಸರ್ಕಾರದ ನೀತಿ ಅಲ್ಲ. ನೀವು ಆಕ್ಷಿ ಶಂಕುಸ್ಥಾಪನೆ ಮಾಡಿ ಬಿಡಿ. ಅಲ್ಲಿ ಲೋಕಲ್ ಕಾಂಟ್ರಿಬ್ಯೂಷನ್ ಕೊಡುತ್ತಿದ್ದಾರೆ ಎಂದು ಮಾನ್ಯ ಶಿವನಂಜಪ್ಪನವರು ಹೇಳಿದ್ದರಿಂದೇನಾದರೂ ಹಿಂದಿನ ಆರೋಗ್ಯ ಸಚಿವರು ಹಾಗೆ ಮಾಡಿರಬಹುದು.

ಶ್ರೀ ಜಿ. ಎಸ್. ಶಿವನಂಜಪ್ಪ.—೧೯೮೪ರಲ್ಲಿ ನಾನು ಎಂ. ಎಲ್. ಎ. ಆಗಿರಲಿಲ್ಲ, ಜನರನ್ನು ಮೋಸ ಮಾಡುವುದಕ್ಕೋಸ್ಕರ ಆಗ ಹೊಸದಾಗಿ ಅಧಿಕಾರಕ್ಕೆ ಬಂದ ಸರ್ಕಾರ ಆ ರೀತಿ ಮಾಡಿ ಬಿಟ್ಟಿದೆ. ಹೊಸದಾಗಿ ಅಧಿಕಾರಕ್ಕೆ ಬಂದ ಜನತಾ ಸರ್ಕಾರ ಗಟ್ಟಿಯಾಗಿ ನಿಲ್ಲಲಿ ಎಂದು ಹೇಳಿ ಈ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆಯೇ ?

ಅಧ್ಯಕ್ಷರು.—ಮೋಸ ವಂಚನೆ ಅದನ್ನೆಲ್ಲಾ ಬಿಟ್ಟು ನೇರವಾಗಿ ಕೇಳಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಈ ಸಲ ಜನರನ್ನು ತಪ್ಪು ದಾರಿಗೆ ಏಳಿಯತಕ್ಕ ಕೆಲಸವನ್ನು ನಿಲ್ಲಿಸಿಬಿಡಿ, ದಾನಿಗಳು ೬೦ ಸಾವಿರ ಕೊಟ್ಟಿದ್ದಾರೆ. ಲೈಯನ್ಸ್ ಕ್ಲಬ್ಸ್‌ನವರು ೧ ಲಕ್ಷ. ೨೫ ಸಾವಿರ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಇದು ಜಿಲ್ಲಾ ಪರಿಷತ್ತಿನಲ್ಲಿ ೩-೪ ತಿಂಗಳುಗಳ ಹಿಂದೆ ಪ್ರಸ್ತಾಪಕ್ಕೆ ಬಂದು ನಕ್ಷೆ ತಯಾರು ಮಾಡಿ, ನಕ್ಷೆಯನ್ನು ಅಪ್ರೂವಲ್ ಮಾಡಿ, ಕೊಟ್ಟಿದ್ದರೂ ಕೂಡ ಇದುವರೆಗೂ ಮಂಜೂರಾತಿ ಕೊಟ್ಟಿಲ್ಲ. ಅದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ನಕ್ಷೆಯನ್ನು ಅಪ್ರೂವಲ್ ಮಾಡಿಕೊಡಿ ಎಂದು ಆರೋಗ್ಯ ಇಲಾಖೆಯವರು ಜಿಲ್ಲಾಧಿಕಾರಿಗಳಿಗೆ, ಹಾಗೂ ಜಿಲ್ಲಾಪರಿಷತ್ತಿಗೆ ಒಪ್ಪಿಸಿದ್ದಾರೆ. ಇದಕ್ಕೆ ಆಡಳಿತಾತ್ಮಕವಾಗಿ ಇನ್ನು ಒಪ್ಪಿಗೆ ಬಂದಿಲ್ಲ. ಮಾನ್ಯ ಸದಸ್ಯರು ೬೦ ಸಾವಿರ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಆದು ನನ್ನ ರೆಕಾರ್ಡ್‌ನಲ್ಲಿ ಇಲ್ಲ. ಆದರೂ ಕೂಡ, ಮಾನ್ಯ ಶಿವನಂಜಪ್ಪನವರು ಹೇಳಿರುವುದರಿಂದ ಈ ೬೦ ಸಾವಿರ ಹಾಗೂ ೧ ಲಕ್ಷ ೨೫ ಸಾವಿರ ಬಂದಿದೆಯೆಂದು ತಿಳಿದುಕೊಳ್ಳುತ್ತೇನೆ. ಈ ಜಿಲ್ಲೆಯಲ್ಲಿ ಇಂತಹ ಕಟ್ಟಡ ಕಟ್ಟಲು ಈ ವರ್ಷ ೩ ಲಕ್ಷ ಕೊಟ್ಟಿದ್ದೇವೆ. ಕಳೆದ ವರ್ಷ ೮ ಲಕ್ಷ ಕೊಟ್ಟಿದ್ದೆವು. ಅದರಲ್ಲಿ ಕಾಣಿಗಲ್ ತಾಲ್ಲೂಕಿನಲ್ಲಿ ಆಸ್ಪತ್ರೆ ಕಟ್ಟಲು ಉಪಯೋಗಿಸಿಕೊಂಡಿದ್ದಾರೆ. ಈ ವರ್ಷ ಇದನ್ನು ಪ್ರಾರಂಭ ಮಾಡಲು ಹಣವನ್ನು ಒದಗಿಸುತ್ತೇನೆ.

ಕ. ರಾ. ರ. ಸಾ. ಸಂಸ್ಥೆಯಂವರು ಗಳಿಸಿದ ಲಾಭ ಹಾಗೂ ನಷ್ಟ

೧೩೬೬. ಶ್ರೀ ಜಿ. ರಾಜೂ ಗೌಡ, (ಹನೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸರಾಸರಿ ಒಂದು ದಿನಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ವಿವಿಧ ಸ್ಥಳಗಳಿಗೆ ಪ್ರಯಾಣಿಸುವವರ ಸಂಖ್ಯೆ ಎಷ್ಟು ?

ಆ) ಪ್ರತಿದಿನ ಸರಾಸರಿ ಎಷ್ಟು ಮೈಲಿಗಳ ಸಂಚಾರ ಮಾಡಲಾಗುತ್ತಿದೆ ?

ಇ) ಒಂದು ಲೀಟರ್ ಪೆಟ್ರೋಲಿಗೆ ಸರಾಸರಿ ಎಷ್ಟು ಮೈಲಿ ಓಡಿಸಲಾಗುತ್ತಿದೆ ?

ಈ) ೧೯೮೬-೮೭ ಮತ್ತು ೧೯೮೭-೮೮ರಲ್ಲಿ ಈ ಸಂಸ್ಥೆ ಗಳಿಸಿರುವ ಲಾಭ ಮತ್ತು ನಷ್ಟದ ಪ್ರಮಾಣವೆಷ್ಟು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಸುಮಾರು ೪೭ ಲಕ್ಷ ಪ್ರಯಾಣಿಕರು ಪ್ರತಿದಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಾಹನಗಳಲ್ಲಿ ಪ್ರಯಾಣಿಸುತ್ತಾರೆ.

ಆ) ಪ್ರತಿದಿನ ಸರಾಸರಿ ೨೧.೧೭ ಲಕ್ಷ ಕಿ.ಮೀ.ಗಳ ಕಾರ್ಯಾಚರಣೆಯಾಗಿದೆ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಾಹನಗಳು ಡೀಸಲ್‌ನಿಂದ ಓಡಿಸಲ್ಪಡುತ್ತವೆ. ಇವುಗಳ ಸಾಧನೆ ಪ್ರತಿ ಲೀಟರಿಗೆ ಸರಾಸರಿ ೪–೩೮ ಕಿ.ಮೀ ಗಳು.

ಈ) ೧೯೮೬–೮೭ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೭೯–೭೦ ಲಕ್ಷ ರೂ.ಗಳ ನಷ್ಟವನ್ನು ಅನುಭವಿಸಿದೆ. ೧೯೮೭–೮೮ನೇ ಸಾಲಿನ ಲಾಭ / ನಷ್ಟಗಳು ಇನ್ನೂ ನಿರ್ಧಾರವಾಗಿಲ್ಲ.

ಶ್ರೀ ಜಿ. ರಾಜೂಗೌಡ.—೧೯೮೬–೮೭ರಲ್ಲಿ ೮ ಕೋಟಿ ರೂಪಾಯಿ ನಷ್ಟವನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅನುಭವಿಸಿದೆ, ಈ ನಷ್ಟ ಆಗಿರತಕ್ಕದ್ದು ೧೯೮೫–೮೬ಕ್ಕಿಂತ ಶೇಕಡ ಎಷ್ಟು ಜಾಸ್ತಿಯಾಗಿದೆ ಅಥವಾ ಕಡಿಮೆಯಾಗಿದೆ ? ನಷ್ಟವನ್ನು ತಗ್ಗಿಸತಕ್ಕಂಥ ಕೆಲಸದಲ್ಲಿ ಸರ್ಕಾರ ಕೈಗೊಂಡಿರತಕ್ಕ ಮುಂಖ್ಯ ಕಾರಣವೇನೆಂಬುದನ್ನು ಮಾನ್ಯ ಸಚಿವರು ಹೇಳುತ್ತಾರೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—೧೯೮೬–೮೭ರಲ್ಲಿ ಆಗಿರತಕ್ಕ ನಷ್ಟ ೧೯೮೫–೮೬ಕ್ಕಿಂತ ಕಡಿಮೆಯಾಗಿದೆ. ಬರತಕ್ಕ ೧೯೮೭–೮೮ರಲ್ಲಿ ಈ ನಷ್ಟ ಇನ್ನೂ ಕಡಿಮೆಯಾಗುತ್ತದೆಂಬ ವಿಶ್ವಾಸ ನನಗಿದೆ. ಈ ನಷ್ಟವನ್ನು ಕಡಿಮೆ ಮಾಡಲು ಅನೇಕ ಕಾರ್ಯಕ್ರಮಗಳನ್ನು ಸಾರಿಗೆ ಸಂಸ್ಥೆಯವರು ಹಾಕಿಕೊಂಡಿದ್ದಾರೆ. ಡೀಸಲ್‌ನಲ್ಲಿ ಉಳಿತಾಯ ಮಾಡತಕ್ಕದ್ದು, ಟೈರ್‌ನಲ್ಲಿ ಉಳಿತಾಯ ಮಾಡತಕ್ಕದ್ದು ವಾಹನಗಳ ಯುಟಿಲೈಜೇಷನ್ ಹೆಚ್ಚು ಮಾಡತಕ್ಕದ್ದು. ಈ ರೀತಿ ಮೂರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದಷ್ಟು ನಷ್ಟವನ್ನು ಕಡಿಮೆ ಮಾಡಲು ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಜಿ. ರಾಜೂ ಗೌಡ.—ಈಗಿರತಕ್ಕ ವಾಹನಗಳ ಪ್ರಮಾಣಕ್ಕೆ ಅನುಗುಣವಾಗಿ ಸಿಬ್ಬಂದಿ ಇಲ್ಲ. ಇದು ಬಹಳ ಹೆಚ್ಚಿದೆ. ಈ ಸಿಬ್ಬಂದಿಯನ್ನು ಕಡಿಮೆ ಮಾಡಲು ವ್ಯವಸ್ಥೆ ಮಾಡಬೇಕು. ಈಗ ಇಲ್ಲಿ ಸಿಬ್ಬಂದಿ ಸಂಖ್ಯೆ ಜಾಸ್ತಿ ಇದೆ. ಆದ್ದರಿಂದ ನಷ್ಟ ಹೆಚ್ಚಾಗುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಹೆಚ್ಚು ಸಿಬ್ಬಂದಿ ಇಲ್ಲ. ಪ್ರತಿ ಬಸ್ಸಿಗೆ ೭–೮ ಜನ ಸಿಬ್ಬಂದಿ ಇದೆ. ಇದನ್ನು ಹೆಚ್ಚು ಮಾಡದೆ ಅವಶ್ಯಕತೆಗೆ ಎಷ್ಟುಬೇಕೋ ಅಷ್ಟನ್ನು ಉಳಿಸಿಕೊಳ್ಳಲಿತ್ತಿದ್ದೇನೆ. ಹೆಚ್ಚು ಇದ್ದರೆ ಕಡಿಮೆ ಮಾಡಲು ಕ್ರಮಂತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ರಾಜೂಗೌಡ.—ಆಂಧ್ರ ಮತ್ತು ತಮಿಳುನಾಡಿನಲ್ಲಿ ವಾಹನಗಳ ಸಂಖ್ಯೆ ಮಂತ್ತು ಸಿಬ್ಬಂದಿ ಸಂಖ್ಯೆಯನ್ನು ಹೋಲಿಸಿ ನೋಡಿದಾಗ ಅಲ್ಲಿ ಸಮಗಿಂತಲೂ ಕಡಿಮೆ ಇದೆ. ೪–೫ ಜನ ಒಂದು ಬಸ್ಸಿಗಿದ್ದಾರೆ. ಇಲ್ಲಿ ೭–೮ ಜನ ಇದ್ದಾರೆ. ಆದ್ದರಿಂದ ಇಲ್ಲಿ ನಷ್ಟ ಹೆಚ್ಚಾಗುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇದರ ಬಗ್ಗೆ ಯಾರೋ ತಪ್ಪು ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದಾರೆ. ನಮ್ಮ ರಾಷ್ಟ್ರದಲ್ಲಿಯೇ ಬಸ್ಸುಗಳ ಸಂಖ್ಯೆ ಮಂತ್ತು ಅಲ್ಲಿರತಕ್ಕ ಕಾರ್ಮಿಕರ ಸಂಖ್ಯೆಯನ್ನು ಹೋಲಿಸಿ ನೋಡಿರೆ ಇದರ ಬಗ್ಗೆ ಗೊತ್ತಾಗುತ್ತದೆ. ರಾಷ್ಟ್ರದಲ್ಲಿ ಸಿಬ್ಬಂದಿ ಕಡಿಮೆ ಇರತಕ್ಕ ಸಂಸ್ಥೆಗಳಲ್ಲಿ ನಮ್ಮದೂ ಕೂಡ ಒಂದಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಹಸಿರು ಹಾಗೂ ಹಳದಿ ರೇಷನ್ ಕಾರ್ಡುಗಳು

೧೬೬೧. ಶ್ರೀ ಸಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಬಡವರಿಗೆ ಪರಿಹಾರ ನೀಡಲು ಹಸಿರು ಮತ್ತು ಹಳದಿ ರೇಷನ್ ಕಾರ್ಡುಗಳನ್ನು ಕೊಟ್ಟು ಎಷ್ಟು ವರ್ಷಗಳಾದವು ?

ಆ) ನಗರ ಮತ್ತು ಮಹಾ ನಗರಗಳಲ್ಲಿ ಅಷ್ಟೇ ಪ್ರಮಾಣದ ಬಡತನದ ಬೇಗೆಯಿಂದ ನೊಂದವರು ಇದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಹಸಿರು ಮತ್ತು ಹಳದಿ ರೇಷನ್ ಕಾರ್ಡುಗಳನ್ನು ನಗರ ಮತ್ತು ಮಹಾ ನಗರಗಳಲ್ಲಿ ಕೊಡದಿರುವುದು ತಾರತಮ್ಯ ಮಾಡಿದಂತಾಗಿರುವುದಿಲ್ಲವೇ ?